

بسم اللهِ الرّحمٰن الرّحيم

# ಮಕ್ಕಾ ವಿಜಯದ ನಂತರ ಪ್ರಮುಖ ವಿಗ್ರಹಗಳ ನಾಶ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **15–08–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಕಳೆದ ಜುಮಾ ಖುತ್ಬದಲ್ಲಿ ನಾನು ಮೂರು ದೊಡ್ಡ ವಿಗ್ರಹಗಳನ್ನು ನಾಶಪಡಿಸಿದ ಬಗ್ಗೆ ಹೇಳಿದ್ದೆ. ಅದರ ಹೆಚ್ಚಿನ ವಿವರಣೆ ಹೀಗಿದೆ: ಹಝ್ರತ್ ಸಅದ್ ಬಿನ್ ಝೈದ್ ಅಶ್‌ಹಲಿ(ರ) ನಡೆಸಿದ ಒಂದು ಕಾರ್ಯಾಚರಣೆಯಿತ್ತು. ಹಿಜರಿ 8, ರಮಝಾನ್ 24ರಂದು ಹಝ್ರತ್ ಪೈಗಂಬರ್(ಸ) 'ಮನಾತ್' ವಿಗ್ರಹವನ್ನು ಕೆಡವಲು ಕಳುಹಿಸಿದ್ದರು. ಈ ವಿಗ್ರಹವನ್ನು ಕೆಂಪು ಸಮುದ್ರದ ದಡದಲ್ಲಿರುವ ಕದೀದ್‌ನ ಹತ್ತಿರದ ಮುಶಲ್ಲಲ್ ಎಂಬ ಸ್ಥಳದಲ್ಲಿ ಸ್ಥಾಪಿಸಲಾಗಿತ್ತು. ಇದೇ ಕಾರಣಕ್ಕೆ  ಈ ಕಾರ್ಯಾಚರಣೆಯನ್ನು 'ಸರಿಯಾ ಮುಶಲ್ಲಲ್' ಎಂದೂ ಕರೆಯಲಾಗುತ್ತದೆ.

ಹಝ್ರತ್ ಸಅದ್ ಬಿನ್ ಝೈದ್ ಅಶ್‌ಹಲಿ(ರ) ಅಲ್ಲಿಗೆ ತಲುಪಿದಾಗ, ಅಲ್ಲಿ ಒಬ್ಬ ಪೂಜಾರಿ ಇದ್ದನು. 'ನೀವು ಏನು ಬಯಸುತ್ತೀರಿ?' ಎಂದು ಪೂಜಾರಿ ಅವರೊಡನೆ ಕೇಳಿದನು. 'ಮನಾತ್ ವಿಗ್ರಹವನ್ನು ಕೆಡವಲು ಬಯಸುತ್ತೇನೆ'  ಎಂದು ಅವರು ಹೇಳಿದರು. 'ಈ ಕೆಲಸವನ್ನು ನಿಮ್ಮಿಂದ ಮಾಡಲು ಸಾಧ್ಯವಿಲ್ಲ' ಎಂದು ಪೂಜಾರಿ ಹೇಳಿದನು. ಅವರು ವಿಗ್ರಹದ ಕಡೆಗೆ ಧಾವಿಸಿದರು. ವರದಿಗಾರ ಹೇಳುತ್ತಾರೆ: ಆ ವೇಳೆ ಕಪ್ಪು ಬಣ್ಣದ, ವಿವಸ್ತ್ರ ಮತ್ತು ಚದುರಿದ ಕೂದಲಿನ ಮಹಿಳೆಯೊಬ್ಬಳು ಕೋಣೆಯಿಂದ ಹೊರಬಂದಳು. ಪೂಜಾರಿ ತನ್ನ ವಿಗ್ರಹದೊಡನೆ ಹೀಗೆ ಹೇಳಿದನು: 'ಎಲೈ ಮನಾತ್, ನಿನ್ನ ಕೋಪವನ್ನು ಕಳುಹಿಸು.' ಹಝ್ರತ್ ಸಅದ್ ಬಿನ್ ಝೈದ್ ಅಶ್‌ಹಲಿ(ರ) ಆ ಪೂಜಾರಿಯನ್ನು ಕೊಂದರು. (ಇದಕ್ಕೆ ಸಂಬಂಧಿಸಿ ಹುಝೂರ್ ಹೀಗೆ ಹೇಳಿದರು:) ಇದು ಸತ್ಯವೇ ಅಥವಾ ವರ್ಣರಂಜಿತವಾಗಿ ಹೇಳಲಾಗಿದೆಯೋ ಗೊತ್ತಾಗುತ್ತಿಲ್ಲ. ಈ ಕೊಲೆಯ ಕುರಿತಾದ ವರದಿ ನಿಜವಾಗಿದ್ದರೆ, ಆ ಪೂಜಾರಿ ಹೋರಾಡಲು ಪ್ರಯತ್ನಿಸಿರಬಹುದು ಮತ್ತು ಹೋರಾಟದಲ್ಲಿ ಸಾವನ್ನಪ್ಪಿರಬಹುದು. ಅಲ್ಲದೆ ಕೇವಲ ಶಾಪ ಹಾಕಿದ್ದಕ್ಕೆ ಕೊಲೆ ಮಾಡುವುದು ಇಸ್ಲಾಮಿನ ಬೋಧನೆಯೇ ಅಲ್ಲ. ಇದು ಸರಿಯಾದ ಘಟನೆಯಂತೆ ತೋರುವುದಿಲ್ಲ. ಅಲ್ಲದೆ, ಇದು ಹಝ್ರತ್ ಪೈಗಂಬರ್(ಸ)ರ ಸಾಮಾನ್ಯ ಮಾರ್ಗಸೂಚಿಗಳಿಗೂ ವಿರುದ್ಧವಾಗಿದೆ.

ಕ್ರಿ.ಶ. 629ರ ಜನವರಿಯಲ್ಲಿ, ಹಿಜರಿ 8, ರಮಝಾನ್ 25ರಂದು ಹಝ್ರತ್ ಪೈಗಂಬರ್(ಸ) ಖುರೈಶಿಯರ ಪ್ರಸಿದ್ಧ ವಿಗ್ರಹವಾದ 'ಉಝ್ಝಾ'ವನ್ನು ಕೆಡವಲು ಹಝ್ರತ್ ಖಾಲಿದ್ ಬಿನ್ ವಲೀದ್(ರ)ರನ್ನು ನಖ್‌ಲಗೆ ಕಳುಹಿಸಿದರು. ಇಬ್ನ್ ಇಸ್‌ಹಾಖ್ ಹೇಳುತ್ತಾರೆ, 'ಉಝ್ಝಾ'ದ ಪೂಜಾರಿಗೆ ಹಝ್ರತ್ ಖಾಲಿದ್(ರ)ರ ಆಗಮನದ ಬಗ್ಗೆ ಗೊತ್ತಾದಾಗ, ಅವನು ವಿಗ್ರಹದ ಮೇಲೆ ಖಡ್ಗವನ್ನು ನೇತುಹಾಕಿ ಸ್ವತಃ ಪರ್ವತವನ್ನು ಏರಿ ಈ ಕವಿತೆಯನ್ನು ಹೇಳಲು ಪ್ರಾರಂಭಿಸಿದನು: 'ಎಲೈ 'ಉಝ್ಝಾ', ಎಲ್ಲವನ್ನೂ ನಾಶಪಡಿಸುವಂಥ ತೀವ್ರವಾದ ಆಕ್ರಮಣವನ್ನು ಖಾಲಿದ್‌ರ ಮೇಲೆ ಮಾಡು. ನಿನ್ನ ಯುದ್ಧ ಮುಖವಾಡವನ್ನು ಧರಿಸು ಮತ್ತು ನಿನ್ನ ಅಂಗಿತೋಳುಗಳನ್ನು ಮಡಚು. ಎಲೈ 'ಉಝ್ಝಾ', ನೀನು ಖಾಲಿದನನ್ನು ಕೊಲ್ಲದಿದ್ದರೂ, ಅವನನ್ನು ಶೀಘ್ರದಲ್ಲಿ ನಡೆಯಲಿರುವ ಪಾಪಕ್ಕೆ ಅರ್ಹನನ್ನಾಗಿ ಮಾಡು ಅಥವಾ ಅವನಿಂದ ಸೇಡು ತೀರಿಸಿಕೊ.'

ಹಝ್ರತ್ ಖಾಲಿದ್(ರ) ನಖ್‌ಲ ತಲುಪಿದ ಕೂಡಲೇ, ಅಲ್ಲಿನ ಕರಿಜಾಲಿ ಮರಗಳನ್ನು ಕಡಿದರು ಮತ್ತು 'ಉಝ್ಝಾ' ವಿಗ್ರಹವಿದ್ದ ಮನೆಯನ್ನು ಧ್ವಂಸ ಮಾಡಿದರು. ಅನಂತರ ಮಕ್ಕಾಗೆ ಹಿಂತಿರುಗಿ ಹಝ್ರತ್ ಪೈಗಂಬರ್(ಸ)ರಿಗೆ ವರದಿ ಸಲ್ಲಿಸಿದರು. ಆಗ ಹಝ್ರತ್ ಪೈಗಂಬರ್(ಸ) ಕೇಳಿದರು: 'ನೀವು ಅಲ್ಲಿ ಏನಾದರೂ ವಿಶೇಷವಾದದ್ದನ್ನು ನೋಡಿದಿರಾ? ಇಲ್ಲವೆಂದು ಹಝ್ರತ್ ಖಾಲಿದ್(ರ) ಉತ್ತರಿಸಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: 'ಹಾಗಾದರೆ ನೀವು 'ಉಝ್ಝಾ'ವನ್ನು ಸಂಪೂರ್ಣವಾಗಿ ಕೊನೆಗೊಳಿಸಿಲ್ಲ, ಹಿಂತಿರುಗಿ ಹೋಗಿ ಅದನ್ನು ಸಂಪೂರ್ಣವಾಗಿ ನಾಶ ಮಾಡಿ ಬನ್ನಿರಿ.' ಹಝ್ರತ್ ಖಾಲಿದ್(ರ) ಆದೇಶವನ್ನು ಪಾಲಿಸಲು ತಕ್ಷಣ ಹಿಂದಿರುಗಿದರು. ಕಾವಲುಗಾರರು ಪುನಃ ಹಝ್ರತ್ ಖಾಲಿದ್(ರ)ರನ್ನು ಕಂಡಾಗ, ಅವರು ಪರ್ವತವನ್ನು ಏರಿದರು ಮತ್ತು 'ಎಲೈ 'ಉಝ್ಝಾ' ಇವರನ್ನು ನಾಶಪಡಿಸು' ಎಂದು ಹೇಳುತ್ತಿದ್ದರು. ಆಗ, ಆ ಮಂದಿರದಿಂದ ಚದುರಿದ ಕೂದಲಿನ, ಕಪ್ಪು ಬಣ್ಣದ ಮಹಿಳೆಯೊಬ್ಬಳು ಹೊರಬಂದಳು. ಆ ವೇಳೆ ಹಝ್ರತ್ ಖಾಲಿದ್(ರ) ಹೀಗೆ ಪದ್ಯ ಹೇಳುತ್ತಿದ್ದರು: 'ಎಲೈ 'ಉಝ್ಝಾ' ನಾನು ನಿನ್ನನ್ನು ನಿರಾಕರಿಸುತ್ತೇನೆ, ನಾನು ನಿನ್ನ ಪವಿತ್ರತೆಯ ಬಗ್ಗೆ ಹೇಳುವುದಿಲ್ಲ. ಅಲ್ಲಾಹನು ನಿನ್ನನ್ನು ಅವಮಾನಿಸಿದ್ದಾನೆ ಎಂದು ನಾನು ನೋಡಿದ್ದೇನೆ.' ಅನಂತರ, ಅವರು ಹಿಂತಿರುಗಿ ಬಂದು ಹಝ್ರತ್ ಪೈಗಂಬರ್(ಸ)ರಿಗೆ ಈ ವರದಿಯನ್ನು ಸಲ್ಲಿಸಿದಾಗ, ಹಝ್ರತ್ ಪೈಗಂಬರ್(ಸ) ಹೇಳಿದರು: 'ಹೌದು, ಅದುವೇ ಆ 'ಉಝ್ಝಾ' ನಿಮ್ಮ  ನಗರಗಳಲ್ಲಿ ಅದನ್ನು ಇನ್ನು ಮುಂದೆ ಯಾರೂ ಪೂಜಿಸರು ಎಂಬ ಕಾರಣದಿಂದ  ಅದು ನಿರಾಶೆಗೊಂಡಿದೆ.'

ಹಿಜರಿ 8ರ ರಮಝಾನ್‌ನಲ್ಲೇ ಸುವಾಅ್ ವಿಗ್ರಹದ ಕಡೆಗೆ ಹಝ್ರತ್ ಅಮ್ರ್ ಬಿನ್ ಆಸ್‌ರ ಕಾರ್ಯಾಚರಣೆ ನಡೆಯಿತು.. 'ಉಝ್ಝಾ' ವಿಗ್ರಹವನ್ನು ಬೀಳಿಸಲಿಕ್ಕಾಗಿ ಕಳುಹಿಸುವುದರ ಜೊತೆಗೆ ಹಝ್ರತ್ ಪೈಗಂಬರ್(ಸ) ಹಝ್ರತ್ ಅಮ್ರ್ ಬಿನ್ ಆಸ್‌ರನ್ನು ಸುವಾಅ್ ವಿಗ್ರಹವನ್ನು ನಾಶಪಡಿಸಲು ಕಳುಹಿಸಿದ್ದರು. ಈ ವಿಗ್ರಹವು ಮಹಿಳೆಯ ರೂಪದಲ್ಲಿತ್ತು. ಪವಿತ್ರ ಖುರ್‌ಆನಿನಲ್ಲಿ ಕೆಲವು ವಿಗ್ರಹಗಳ ಹೆಸರುಗಳನ್ನು ಉಲ್ಲೇಖಿಸಲಾಗಿದೆ, ಅವುಗಳಲ್ಲಿ ಈ ವಿಗ್ರಹವೂ ಸೇರಿದೆ. ಸೂರ ನೂಹ್‌ನಲ್ಲಿ ಹೀಗೆ ಹೇಳಲಾಗಿದೆ: 'ಅವರು ಪರಸ್ಪರ ಹೇಳಿದರು – ನಿಮ್ಮ

ದೇವರುಗಳನ್ನು ನೀವೆಂದಿಗೂ ಬಿಟ್ಟುಬಿಡಬಾರದು. ವದ್ದ್, ಸುವಾಅ್, ಯಗೂಸ್, ಯವೂಖ್ ಮತ್ತು ನಸ್ರ್ – ಇವರ್ಯಾರನ್ನೂ ನೀವು ಪರಿತ್ಯಜಿಸಬೇಡಿರಿ.'

ವಾಸ್ತವದಲ್ಲಿ, ಇವೆಲ್ಲವೂ ಹಝ್ರತ್ ನೂಹ್(ಅ)ರ ಜನಾಂಗದಲ್ಲಿದ್ದ ಕೆಲವು ಒಳ್ಳೆಯ ವ್ಯಕ್ತಿಗಳ ಹೆಸರುಗಳಾಗಿವೆ. ಅವರು ಮರಣಹೊಂದಿದಾಗ, ಆ ಸ್ಥಳಗಳಲ್ಲಿ ವಿಗ್ರಹಗಳನ್ನು ಸ್ಥಾಪಿಸಲು ಮತ್ತು ಅವುಗಳಿಗೆ ಅವರ ಹೆಸರನ್ನೇ ಇಡಲು ಶೈತಾನ್ ಅವರ ಹೃದಯದಲ್ಲಿ ಪ್ರಚೋದನೆ ಹಾಕಿದನು. ಇದರಂತೆ ಅವರು ಮಾಡಿದರು ಮತ್ತು ಅವುಗಳನ್ನು ಪೂಜಿಸಲಾಯಿತು.

ಹಝ್ರತ್ ಅಮ್ರ್ ಬಿನ್ ಆಸ್(ರ) ರಹಾತ್ ಎಂಬ ಸ್ಥಳದಲ್ಲಿ ಸುವಾಅ್‌ದ ಹತ್ತಿರ ತಲುಪಿದಾಗ, ಅಲ್ಲಿ ಅವರು ಅದರ ಪೂಜಾರಿಯನ್ನು ಭೇಟಿಯಾದರು. 'ನಾನು ಹಝ್ರತ್ ಪೈಗಂಬರ್(ಸ)ರ ಆದೇಶದ ಮೇರೆಗೆ ಈ ವಿಗ್ರಹವನ್ನು ಒಡೆಯಲು ಬಂದಿದ್ದೇನೆ' ಎಂದು ಅವರು ಪೂಜಾರಿಯೊಡನೆ ಹೇಳಿದರು. 'ಇದನ್ನು ಒಡೆಯಲು ನಿಮಗೆ ಎಂದಿಗೂ ಸಾಧ್ಯವಿಲ್ಲ' ಎಂದು ಪೂಜಾರಿ ಉತ್ತರಿಸಿದನು. ಏಕೆ ಸಾಧ್ಯವಿಲ್ಲವೆಂದು ಕೇಳಿದಾಗ, 'ಅದು ನಿಮ್ಮನ್ನು ಹೇಗಾದರೂ ತಡೆಯುವುದು' ಎಂದು ಪೂಜಾರಿ ಉತ್ತರಿಸಿದನು. ಹಝ್ರತ್ ಅಮ್ರ್(ರ) ಹೇಳಿದರು: 'ನಿಮ್ಮ ಬಗ್ಗೆ ಖೇದವಾಗುತ್ತಿದೆ. ಇದಕ್ಕೆ ಆಲಿಸಲು ಮತ್ತು ನೋಡಲು ಸಾಧ್ಯವಿದೆಯೇ?' ಅನಂತರ ಅವರು ಮುಂದೆ ಹೋಗಿ ಅದನ್ನು ಒಡೆದುಹಾಕಿದರು ಮತ್ತು ತಮ್ಮ ಜೊತೆಗಾರರೊಡನೆ ಅದರ ಪಕ್ಕದಲ್ಲಿ ನಿರ್ಮಿಸಲಾಗಿದ್ದ ಕೋಣೆಯನ್ನು ಕೂಡ ಧ್ವಂಸ ಮಾಡಲು ಹೇಳಿದರು. ಅವರು ಅದನ್ನು ಧ್ವಂಸ ಮಾಡಿದರು. ಅನಂತರ 'ಈಗ ಏನು ಹೇಳುತ್ತೀಯ' ಎಂದು ಹಝ್ರತ್ ಅಮ್ರ್(ರ) ಆ ಪೂಜಾರಿಯೊಡನೆ ಕೇಳಿದರು. ಆಗ ಅವನು ತನ್ನ ದೇವತೆಯ ಈ ಸ್ಥಿತಿಯನ್ನು ನೋಡಿ, ತಕ್ಷಣವೇ, 'ನಾನು ಅಲ್ಲಾಹನಿಗೆ ವಿಧೇಯನಾಗಿದ್ದೇನೆ ಮತ್ತು ನಾನು ಇಸ್ಲಾಮನ್ನು ಸ್ವೀಕರಿಸುತ್ತೇನೆ' ಎಂದು ಹೇಳಿದನು. (ಹುಝೂರ್ ಹೇಳಿದರು:) ಮುಂಚೆ ಪ್ರಸ್ತಾಪಿಸಲಾದ ಘಟನೆಯಲ್ಲಿ ಪೂಜಾರಿಯನ್ನು ಕೊಲೆ ಮಾಡಲಾಗಿತ್ತು ಎಂಬ ಉಲ್ಲೇಖ ಸರಿಯಾಗಿರಲು ಸಾಧ್ಯವಿಲ್ಲವೆಂದು ಈ ಘಟನೆಯಿಂದ ಅಂದಾಜು ಮಾಡಬಹುದಾಗಿದೆ.

**ಹಿಜರಿ 8, ಶವ್ವಾಲ್ ತಿಂಗಳಲ್ಲಿ ಬನೂ ಜಝೀಮದ ಕಡೆಗೆ ಹಝ್ರತ್ ಖಾಲಿದ್ ಬಿನ್ ವಲೀದ್‌ರ ದಂಡಯಾತ್ರೆ.** ಮಕ್ಕಾದ ವಿಜಯದ ನಂತರ, ಹಝ್ರತ್ ಖಾಲಿದ್ ಬಿನ್ ವಲೀದ್(ರ) 'ಉಝ್ಝಾ' ವಿಗ್ರಹವನ್ನು ಕೆಡವಿ ಹಿಂದಿರುಗಿದಾಗ, ಹಝ್ರತ್ ಪೈಗಂಬರ್(ಸ) ಹಝ್ರತ್ ಖಾಲಿದ್(ರ)ರನ್ನು ಮಕ್ಕಾದ ಯಲ್‌ಮಲಂನ ಸಮೀಪ ವಾಸಿಸುತ್ತಿದ್ದ ಬನು ಜಝೀಮ ಕಡೆಗೆ ಕಳುಹಿಸಿದರು. ಆ ಗೋತ್ರಕ್ಕೆ ಇಸ್ಲಾಮಿನ ಸಂದೇಶವನ್ನು ನೀಡಬೇಕೆಂದು ಹಝ್ರತ್ ಪೈಗಂಬರ್(ಸ) ಹಝ್ರತ್ ಖಾಲಿದ್(ರ)ರೊಡನೆ ಹೇಳಿದರು ಮತ್ತು ಅವರೊಂದಿಗೆ ಯುದ್ಧ ಮಾಡಬಾರದು ಎಂದು ಕೂಡ ಹೇಳಿದರು. ಇಬ್ನ್ ಸಅದ್ ಹೇಳುತ್ತಾರೆ: ಖಾಲಿದ್(ರ) ಅವರ ಬಳಿಗೆ ತಲುಪಿದಾಗ, 'ನೀವು ಯಾವ ಧರ್ಮದಲ್ಲಿ ಇದ್ದೀರಿ?' ಎಂದು ಕೇಳಿದರು. 'ನಾವು ಮುಸ್ಲಿಮರು' ಎಂದು ಜನರು ಉತ್ತರಿಸಿದರು. 'ಹಾಗಾದರೆ ನೀವು ಏಕೆ ಆಯುಧಗಳನ್ನು ಹಿಡಿದುಕೊಂಡಿದ್ದೀರಿ?' ಎಂದು ಖಾಲಿದ್(ರ) ಕೇಳಿದರು. ಜನರು ಹೇಳಿದರು: 'ನಾವು ಮತ್ತು ಅರೇಬಿಯದ ಒಂದು ಜನಾಂಗದ ನಡುವೆ ವಿರೋಧವಿದೆ. ನೀವು ಅದೇ ಶತ್ರು ಜನಾಂಗದವರು ಎಂದು ನಾವು ಭಯಪಟ್ಟೆವು, ಆದ್ದರಿಂದ ಆಯುಧಗಳನ್ನು ಹಿಡಿದುಕೊಂಡೆವು.'

ವರದಿಗಳಿಂದ ತಿಳಿದುಬರುವುದೇನೆಂದರೆ, ಹಝ್ರತ್ ಖಾಲಿದ್(ರ)ರಿಗೆ ಆ ಜನರ ಬಗ್ಗೆ ಭರವಸೆ ಇರಲಿಲ್ಲ. ಆದ್ದರಿಂದ, ಆ ಕೈದಿಗಳನ್ನು ಕೊಲ್ಲುವುದು ಸೂಕ್ತವೆಂದು ಅವರು ಒಂದು ರಾತ್ರಿ ಅಭಿಪ್ರಯಪಟ್ಟರು. ಅದರಂತೆ ಕೆಲ ಮುಸ್ಲಿಮರು ತಮ್ಮ ಕೈದಿಗಳನ್ನು ಕೊಂದರು, ಆದರೆ ಹಳೆಯ ಮುಸ್ಲಿಮರಾಗಿದ್ದ ಮುಹಾಜಿರರು ಮತ್ತು ಅನ್ಸಾರರು ಖಾಲಿದ್(ರ)ರ ಈ ಅಭಿಪ್ರಾಯವನ್ನು ಒಪ್ಪಲಿಲ್ಲ ಮತ್ತು ತಮ್ಮ ಕೈದಿಗಳನ್ನು ಕೊಲ್ಲಲಿಲ್ಲ. ಹಝ್ರತ್ ಪೈಗಂಬರ್(ಸ)ರಿಗೆ ಈ ಸಂಪೂರ್ಣ ಘಟನೆಯ ಬಗ್ಗೆ ಗೊತ್ತಾದಾಗ ಅವರಿಗೆ ಬಹಳ ದುಃಖವಾಯಿತು. ಹಝ್ರತ್ ಪೈಗಂಬರ್(ಸ) ಹೇಳಿದರು: ಅವರನ್ನು ಕೊಲ್ಲಲು ನಾನು ಖಾಲಿದ್‌ಗೆ ಆದೇಶ ನೀಡಿರಲಿಲ್ಲ, ನಾನು ಅವರನ್ನು ಇಸ್ಲಾಮಿಗೆ ಆಹ್ವಾನಿಸಲು ಮಾತ್ರ ಹೇಳಿದ್ದೆ' ಅನಂತರ ಹಝ್ರತ್ ಪೈಗಂಬರ್(ಸ) ತಮ್ಮ ಎರಡೂ ಕೈಗಳನ್ನು ಎತ್ತಿ, ಅಲ್ಲಾಹನ ಮುಂದೆ ಎರಡು ಬಾರಿ ಹೀಗೆ ವಿನಂತಿಸಿಕೊಂಡರು: 'ಹೇ ಅಲ್ಲಾಹ್, ಖಾಲಿದ್ ಏನನ್ನು ಮಾಡಿರುವರೋ, ಅದರಿಂದ ನನ್ನ ಅಸಮ್ಮತಿಯನ್ನು ನಾನು ನಿನ್ನ ಮುಂದೆ ವ್ಯಕ್ತಪಡಿಸುತ್ತೇನೆ'

ಅನಂತರ ಕೊಲ್ಲಲ್ಪಟ್ಟವರಿಗೆ ಪರಿಹಾರಧನವನ್ನು ಪಾವತಿಸಲು ಮತ್ತು ಇಡೀ ವಿಷಯವನ್ನು ತನಿಖೆ ಮಾಡಲು ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿ(ರ)ರನ್ನು ಕಳುಹಿಸಿದರು. ಹಝ್ರತ್ ಅಲಿ(ರ) ಅಲ್ಲಿಗೆ ಹೋಗಿ ಕೊಲ್ಲಲ್ಪಟ್ಟವರ ಎಲ್ಲ ವಾರಸುದಾರರಿಗೆ ಪರಿಹಾರಧನವನ್ನು ಪಾವತಿಸಿದರು ಮತ್ತು ಮುಸ್ಲಿಮರು ಅವರಿಂದ ತೆಗೆದುಕೊಂಡಿದ್ದ ಎಲ್ಲ ಆಸ್ತಿಗಳನ್ನು ಅವರಿಗೆ ಹಿಂದಿರುಗಿಸಿದರು. ನಾಯಿ ನೀರು ಕುಡಿಯುತ್ತಿದ್ದ ಮರದ ಪಾತ್ರೆಯನ್ನು ಕೂಡ ಹಿಂದಿರುಗಿಸಲಾಯಿತು. ಎಲ್ಲರಿಗೂ ಪರಿಹಾರಧನ ಮತ್ತು ಇತರ ಮೊತ್ತಗಳನ್ನು ನೀಡಿದ ನಂತರ, ಹಝ್ರತ್ ಅಲಿ(ರ)ರ ಬಳಿ ಸ್ವಲ್ಪ ಹಣ ಉಳಿಯಿತು. ಅವರು ಆ ಉಳಿದ ಹಣವನ್ನು ಕೂಡ ಅವರಿಗೆ ನೀಡಿದರು ಮತ್ತು ಹೀಗೆ ಹೇಳಿದರು: 'ಅಲ್ಲಾಹನ ರಸೂಲ್(ಸ)ರಿಗೂ ನಿಮಗೂ ತಿಳಿದಿಲ್ಲದ ಸಂಭವನೀಯ ನಷ್ಟವನ್ನು ಕೂಡ ಪರಿಹರಿಸಲಿಕ್ಕಾಗಿ ನಾನು ಈ ಹಣವನ್ನು ಹೆಚ್ಚುವರಿಯಾಗಿ ನೀಡುತ್ತಿದ್ದೇನೆ.'

ಇದರ ಬಗ್ಗೆ ಗೊತ್ತಾದಾಗ ಹಝ್ರತ್ ಪೈಗಂಬರ್(ಸ)ರಿಗೆ ಬಹಳ ಸಂತೋಷವಾಯಿತು ಮತ್ತು ಹಝ್ರತ್ ಅಲಿ(ರ)ರೊಡನೆ ಹೀಗೆ ಹೇಳಿದರು: 'ನೀವು ಸರಿಯಾಗಿ ಮಾಡಿದ್ದೀರಿ ಮತ್ತು ಬಹಳ ಒಳ್ಳೆಯದನ್ನು ಮಾಡಿದ್ದೀರಿ' ಈ ಘಟನೆಗೆ ಮುಂಚೆ ಹಝ್ರತ್ ಪೈಗಂಬರ್(ಸ) ಹೀಗೊಂದು ಕನಸನ್ನು ಕಂಡಿದ್ದಾಗಿ ಹೇಳಿದ್ದರು: 'ನಾನು ಹೈಸ್‌ನ (ಖರ್ಜೂರ, ಚೀಸ್ ಮತ್ತು ತುಪ್ಪದಿಂದ ಮಾಡಲಾಗುವ ಒಂದು ಖಾದ್ಯ) ಒಂದು ತುತ್ತನ್ನು ತಿಂದೆ. ಅದು ರುಚಿಕರವಾಗಿತ್ತು. ಆದರೆ ನಾನು ಅದನ್ನು ನುಂಗಿದಾಗ, ಅದರ ಸ್ವಲ್ಪ ಭಾಗ ನನ್ನ ಗಂಟಲಿನಲ್ಲಿ ಸಿಕ್ಕಿಹಾಕಿಕೊಂಡಿತು. ಆಗ ಹಝ್ರತ್ ಅಲಿ ತನ್ನ ಕೈಯಿಂದ ಅದನ್ನು ಹೊರತೆಗೆದರು. ಇದನ್ನು ಹಝ್ರತ್ ಅಬೂಬಕರ್(ರ) ಹೀಗೆ ವ್ಯಾಖ್ಯಾನಿಸಿದ್ದರು: 'ಅಲ್ಲಾಹನ ಪ್ರವಾದಿಯರೇ, ಇದು ನೀವು ಕಳುಹಿಸುವ ಸೇನಾ ದಳಗಳಲ್ಲಿ ಒಂದರ ಬಗ್ಗೆಯಾಗಿದೆ. ಅದರ ಕೆಲವು ವಿಷಯಗಳು ನಿಮಗೆ ಇಷ್ಟವಾಗುವುವು ಮತ್ತು ಕೆಲವು ಆಕ್ಷೇಪಾರ್ಹವಾಗಿರುವುವು. ಅನಂತರ ನೀವು ಹಝ್ರತ್ ಅಲಿಯನ್ನು ಕಳುಹಿಸುತ್ತೀರಿ ಮತ್ತು ಅವರು ಅದನ್ನು ಸುಗಮಗೊಳಿಸುವರು, ಅಂದರೆ ವಿಷಯವನ್ನು ಸರಿಪಡಿಸುವರು' ಈ ಕಾರ್ಯಾಚರಣೆಯ ಘಟನೆಯಿಂದ ಆ ಕನಸು ನನಸಾಯಿತು.

(ಹುಝೂರ್ ಹೇಳಿದರು:) ಹಝ್ರತ್ ಸಯ್ಯಿದ್ ಝೈನುಲ್ ಆಬಿದೀನ್ ವಲಿಯುಲ್ಲಾಹ್ ಶಾಹ್(ರ) ಸಹೀಹ್ ಬುಖಾರಿಯ ವ್ಯಾಖ್ಯಾನವನ್ನು ಬರೆಯುತ್ತಾ ಅದರಲ್ಲಿ ಈ ವಿಷಯವನ್ನು ಜ್ಞಾನಪೂರ್ಣವಾಗಿ ಹೀಗೆ ವಿವರಿಸಿದ್ದಾರೆ: 'ಹಝ್ರತ್ ಖ಼ಾಲಿದ್ ಬಿನ್ ವಲೀದ್(ರ)ರಿಗೆ ಯಾವುದೇ ದುರುದ್ದೇಶವಿರಲಿಲ್ಲ ಎಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಆದರೆ ಅವರಿಂದ ಅರಿವಿಲ್ಲದೇ ಒಂದು ಪ್ರಮಾದ ಉಂಟಾಯಿತು. ಈ ಕಾರಣಕ್ಕಾಗಿ ಹಝ್ರತ್ ಪೈಗಂಬರ್(ಸ) ಹಝ್ರತ್ ಖಾಲಿದ್(ರ)ರ ಮೇಲೆ ಕೋಪಗೊಂಡರು ಮತ್ತು ಅಲ್ಲಾಹನ ಮುಂದೆ ತಮ್ಮ ದುಃಖವನ್ನು ವ್ಯಕ್ತಪಡಿಸಿದರು. ಕೆಲವು ತಪ್ಪು ತಿಳುವಳಿಕೆಯಿಂದಾಗಿ ಈ ಕೊಲೆಗಳು ನಡೆದಿವೆ ಎಂದು ತನಿಖೆಯಿಂದ ಸಾಬೀತಾದಾಗ, ಹಝ್ರತ್ ಪೈಗಂಬರ್(ಸ) ಹಝ್ರತ್ ಖಾಲಿದ್(ರ)ರನ್ನು ಶಿಕ್ಷಿಸುವುದಕ್ಕೆ ಬದಲಾಗಿ ಆ ಗೋತ್ರದವರಿಗೆ ಪರಿಹಾರಧನವನ್ನು ನೀಡಲು ತೀರ್ಮಾನಿಸಿದರು. ಹಝ್ರತ್ ಖ಼ಾಲಿದ್ ಬಿನ್ ವಲೀದ್(ರ) ತಮ್ಮ ಮನವಿಗಳನ್ನು ಸಲ್ಲಿಸಿದ ಮತ್ತು ಕ್ಷಮೆಯನ್ನು ಯಾಚಿಸಿದ ನಂತರ ಹಝ್ರತ್ ಪೈಗಂಬರ್(ಸ) ಖಾಲಿದ್(ರ)ರನ್ನು ಕ್ಷಮಿಸಿದರು. ಮಾತ್ರವಲ್ಲ, ಕೆಲವೇ ದಿನಗಳ ನಂತರ, ಹುನೈನ್ ಯುದ್ಧಕ್ಕಾಗಿ ಸಿದ್ಧಪಡಿಸಲಾದ ಮುಂಚೂಣಿ ಸೇನಾದಳದ ಮತ್ತು ಕುದುರೆಸವಾರರ ತಂಡದ ಮೇಲ್ನೋಟಗಾರ ಮತ್ತು ಸೇನಾಧಿಪತಿಯಾಗಿ ಹಝ್ರತ್ ಖಾಲಿದ್(ರ)ರನ್ನು ನೇಮಿಸಿದರು.

(ಹುಝೂರ್ ಹೇಳಿದರು,) ಇದರ ಹೊರತಾಗಿ, ಇನ್ನೂ ಎರಡು ದಂಡಯಾತ್ರೆಯ ಸಂಕ್ಷಿಪ್ತ ಉಲ್ಲೇಖವು ಲಭಿಸುತ್ತದೆ.

1. ಸರಿಯಾ ಯಲಮ್‌ಲಮ್: ಹಝ್ರತ್ ಪೈಗಂಬರ್(ಸ) 200 ಸೈನಿಕರ ಈ ದಳವನ್ನು ಹಝ್ರತ್ ಹಿಶಾಂ ಬಿನ್ ಅಲ್ ಆಸ್(ರ)ರ ನಾಯಕತ್ವದಲ್ಲಿ ಮಕ್ಕಾದ ಆಗ್ನೇಯ ಭಾಗದಲ್ಲಿರುವ ಯಲಮ್‌ಲಮ್ ಕಡೆಗೆ ಕಳುಹಿಸಿದರು.

2. ಸರಿಯಾ ಉರ್‌ನ: ಇದು ಅರಫಾತ್‌ನ ಎದುರಿನ ಒಂದು ಕಣಿವೆಯಾಗಿದೆ. ಹಝ್ರತ್ ಪೈಗಂಬರ್(ಸ) ಹಝ್ರತ್ ಖಾಲಿದ್ ಬಿನ್ ಸಯೀದ್ ಬಿನ್ ಅಲ್ ಆಸ್(ರ)ರನ್ನು 300 ಜನರ ಸೈನ್ಯದ ಮುಖ್ಯಸ್ಥರನ್ನಾಗಿ ಮಾಡಿ ಆ ಕಡೆಗೆ ಕಳುಹಿಸಿದ್ದರು ಎಂದು ಹೇಳಲಾಗುತ್ತದೆ. ಈ ದಂಡಯಾತ್ರೆಯ ಉಲ್ಲೇಖವನ್ನು ಮುಹಮ್ಮದ್ ಬಿನ್ ಉಮರ್ ವಾಕಿದಿ ಮಾಡಿದ್ದಾರೆ. ಇವರ ಹೊರತಾಗಿ ಬೇರೆ ಯಾವುದೇ ಪ್ರಸಿದ್ಧ ಚರಿತ್ರೆಗಾರರು ಇದನ್ನು ಉಲ್ಲೇಖಿಸಿಲ್ಲ, ಆದ್ದರಿಂದ ಇದು ಸರಿಯಾಗಿದೆಯೇ ಅಥವಾ ಇಲ್ಲವೇ ಎಂಬುದು ಸಂದೇಹಾಸ್ಪದವಾಗಿದೆ. ಇದರ ಬಗ್ಗೆ ಯಾವುದೇ ಹೆಚ್ಚಿನ ವಿವರಣೆಗಳು ದೊರೆಯುವುದಿಲ್ಲ.

(ಖುತ್ಬದ ಕೊನೆಯಲ್ಲಿ ಹುಝೂರ್ ಹೇಳಿದರು:) ಒಟ್ಟಿನಲ್ಲಿ ಹಝ್ರತ್ ಪೈಗಂಬರ್(ಸ) ಎಂದಿಗೂ ಕಠಿಣತೆಯನ್ನು ತೋರಿಸಲಿಲ್ಲ ಎಂದು ಅವರ ಜೀವನ ಚರಿತ್ರೆಯಿಂದ ಚೆನ್ನಾಗಿ ತಿಳಿದುಬರುತ್ತದೆ. ಇಸ್ಲಾಮಿನ ಶತ್ರುಗಳು ಆರೋಪಿಸುವಂತೆ ಅವರು ಯುದ್ಧಗಳಲ್ಲಿ ಜನರನ್ನು ಕೊಲ್ಲಲು ಆದೇಶಿಸುತ್ತಿದ್ದರು ಎಂಬುದು ನಿರಾಧಾರವಾದ ಮಾತಾಗಿದೆ. ಒಂದು ವೇಳೆ ತಪ್ಪಾಗಿ ಏನಾದರೂ ಸಂಭವಿಸಿದ್ದರೆ ಕೂಡ ಹಝ್ರತ್ ಪೈಗಂಬರ್(ಸ) ತೀವ್ರ ದುಃಖವನ್ನು ವ್ಯಕ್ತಪಡಿಸುತ್ತಿದ್ದರು.

——————————*****——————————

اَلْحَمْدُلِلّٰہِ نَحْمَدُہٗ وَنَسْتَعِیْنُہٗ وَنَسْتَغْفِرُہٗ وَنُؤْمِنُ بِہٖ وَنَتَوَکَّلُ عَلَیْہِ وَنَعُوْذُ بِاللّٰہِ
مِنْ شُرُوْرِ اَنْفُسِنَا وَمِنْ سَیِّئَاتِ اَعْمَالِنَا مَنْ یَّھْدِہِ اللّٰہُ فَلَا مُضِلَّ لَہٗ وَمَنْ یُّضْلِلْہُ
فَلَاھَادِیَ لَہٗ ؕ وَنَشْھَدُ اَنْ لَّآ اِلٰہَ اِلَّا اللّٰہُ وَنَشْھَدُ اَنَّ مُحَمَّدًا عَبْدُہٗ وَرَسُوْلُہٗ
عِبَادَ اللّٰہِ رَحِمَکُمُ اللّٰہُ اِنَّ اللّٰہَ یَأْمُرُ بِالْعَدْلِ وَالْاِحْسَانِ وَاِیْتَاءِ ذِی الْقُرْبٰی
وَیَنْھٰی عَنِ الْفَحْشَآءِ وَالْمُنْکَرِ وَالْبَغْیِ یَعِظُکُمْ لَعَلَّکُمْ تَذَکَّرُوْنَ ۝ اُذْکُرُوا اللّٰہَ
یَذْکُرْکُمْ وَادْعُوْہُ یَسْتَجِبْ لَکُمْ وَلَذِکْرُ اللّٰہِ اَکْبَرُ.


***Friday Sermon delivered by Hadrath Khaleefatul Masih Al Khamis**(atba)*

At, ***'Masjid Mubarak',*** *Islamabad, Tilford,* U.K. On 15-08-2025

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email****: khutuba.kannada@gmail.com*

**You can find all the Sermons archived at**: www.alislam.org/friday-sermon